ಆಗಸ್ಟ್ 2026 ರೂ.50/-

vydehi INSTITUTE OF MEDICAL SCIENCES AND RESEARCH CENTRE

# ವೈದ್ಯಲೋಕ

ಆರೋಗ್ಯ–ಆಹಾರ–ಆಯುರ್ವೇದ

ಯಶಸ್ವಿ 23ನೇ ವರ್ಷ

ಸ್ತನ್ಯಪಾನ ಜಾಗೃತಿ ಸಪ್ತಾಹ

## ತಾಯಿಯ ಹಾಲು ಯಾಕೆ ಅಗತ್ಯ?



## ಮಕ್ಕಳಲ್ಲಿ ಮಲಬದ್ಧತೆ ಮತ್ತು ಮೂತ್ರದ ಸಮಸ್ಯೆಗಳು



## ಮಲಬದ್ಧತೆ ನಿರ್ಲಕ್ಷಿಸದಿರಿ

## ಕೃತಕ ಬುದ್ಧಿಮತ್ತೆ ಕಣ್ಣಿನ ರೋಗ ಪತ್ತೆಯನ್ನು ಹೇಗೆ ಸುಧಾರಿಸುತ್ತಿದೆ?



## ವೈದ್ಯಕೀಯ ಶಿಕ್ಷಣಕ್ಕೆ ಆಚಾರ್ಯ ಸುಶ್ರುತರ ಅದ್ಭುತ ಕೊಡುಗೆ




Scanned with OKEN Scanner






◆ ಡಾ. ಉಳ್ಳಿ ಶಿವಶಂಕರ
ಸಹಾಯಕ ಪ್ರಾಧ್ಯಾಪಕರು, ರಚನಾ ಶರೀರ ವಿಭಾಗ, ರಶ್ಮಿ ಆಯುರ್ವೇದ ವೈದ್ಯಕೀಯ ವಿಜ್ಞಾನ ಹಾಗೂ ಸಂಶೋಧನಾ ಕೇಂದ್ರ, ಕೂಡ್ಲಿಗಿ
ಮೊ.: 96638 47629

# ವೈದ್ಯಕೀಯ ಶಿಕ್ಷಣಕ್ಕೆ ಆಚಾರ್ಯ ಸುಶ್ರುತರ ಅದ್ಭುತ ಕೊಡುಗೆ

## ದೇಹದಾನದ ಮಹತ್ವ - ಸಾವಿರಾರು ವರ್ಷಗಳ ಹಿಂದೆಯೇ ವೈಜ್ಞಾನಿಕ ಶವಚ್ಛೇದನ ವಿಧಾನ ಪರಿಚಯಿಸಿದ ಸುಶ್ರುತ

ಭಾರತೀಯ ವೈದ್ಯಶಾಸ್ತ್ರದ ಇತಿಹಾಸದಲ್ಲಿ ಆಚಾರ್ಯ ಸುಶ್ರುತ ಅವರ ಹೆಸರು ಅತ್ಯಂತ ಗೌರವದಿಂದ ಉಲ್ಲೇಖಿಸಲಾಗುತ್ತದೆ. "ಶಸ್ತ್ರಚಿಕಿತ್ಸೆಯ ಪಿತಾಮಹ" ಎಂದೇ ಪ್ರಸಿದ್ಧರಾದ ಅವರು ರಚಿಸಿದ ಸುಶ್ರುತ ಗ್ರಂಥದಲ್ಲಿ ಶರೀರಶಾಸ್ತ್ರ ಅಧ್ಯಯನಕ್ಕಾಗಿ ಶವ ಸಂರಕ್ಷಣೆ ಮತ್ತು ವಿಚ್ಛೇದನದ ವೈಜ್ಞಾನಿಕ ವಿಧಾನವನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸಲಾಗಿದೆ. ಸುಶ್ರುತರು ವೈದ್ಯಕೀಯ ವಿದ್ಯಾರ್ಥಿಗಳು ಕೇವಲ ಗ್ರಂಥಗಳನ್ನು ಓದುವುದರಿಂದ ಮಾತ್ರ ಸಂಪೂರ್ಣ ಜ್ಞಾನ ಪಡೆಯಲು ಸಾಧ್ಯವಿಲ್ಲ; ನೈಜ ಮಾನವ ಶರೀರದ ಅಧ್ಯಯನ ಅಗತ್ಯ ಎಂದು ಒತ್ತಿಹೇಳಿದ್ದರು. ಸಾವಿರಾರು ವರ್ಷಗಳ ಹಿಂದೆ ಅವರು ನೀಡಿದ ಈ ಮಾರ್ಗದರ್ಶನವು ಇಂದಿನ ಆಧುನಿಕ ವೈದ್ಯಕೀಯ ಶಿಕ್ಷಣದ ಮೂಲತತ್ವಗಳಿಗೆ ಸಮಾನವಾಗಿದೆ.

- **ಶರೀರ ಆಯ್ಕೆಗೆ ಮಾನದಂಡ**

ಸುಶ್ರುತರ ಪ್ರಕಾರ ಶರೀರ ಅಧ್ಯಯನಕ್ಕಾಗಿ ಆಯ್ಕೆಮಾಡುವ ಶರೀರವು ಎಲ್ಲಾ ಅಂಗಾಂಗಗಳೂ ಸಮರ್ಪಕವಾಗಿರುವ ವ್ಯಕ್ತಿಯದ್ದಾಗಿರಬೇಕು. ವಿಷಪ್ರಭಾವದಿಂದ ಮರಣ ಹೊಂದಿರುವುದು, ದೀರ್ಘಕಾಲದ ರೋಗಗಳಿಂದ ಬಳಲಿರುವುದು ಅಥವಾ ಅತಿ ವೃದ್ಧಾವಸ್ಥೆಯ ದೇಹವನ್ನು ಬಳಸಬಾರದು ಎಂದು ಅವರು ಹೇಳಿದ್ದಾರೆ. ತಜ್ಞರ ಅಭಿಪ್ರಾಯದಂತೆ, ಈ ವಿಧಾನವು ಇಂದಿನ "Normal Anatomy" ಅಧ್ಯಯನದ ತತ್ವಕ್ಕೆ ಸಂಪೂರ್ಣ ಹೊಂದಿಕೆಯಾಗುತ್ತದೆ. ಆರೋಗ್ಯಕರ ದೇಹದಲ್ಲಿ ಅಂಗಾಂಗಗಳ ಸ್ವಾಭಾವಿಕ ರಚನೆ ಸ್ಪಷ್ಟವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಸರಿಯಾದ ಶರೀರಜ್ಞಾನ ದೊರೆಯುತ್ತದೆ.

ಶವ ಸಂರಕ್ಷಣೆ ಆರಂಭಿಸುವ ಮೊದಲು ಅಂತ್ರದ(ಕರಳು) ಮಲವನ್ನು ತೆಗೆದುಹಾಕುವಂತೆ ಸುಶ್ರುತರು ಸೂಚಿಸಿದ್ದಾರೆ. ಆಧುನಿಕ ವಿಜ್ಞಾನ ಪ್ರಕಾರ ಮಾನವ ಅಂತ್ರದಲ್ಲಿ ಇರುವ ಬ್ಯಾಕ್ಟೀರಿಯಾಗಳು ಮರಣಾನಂತರ ದೇಹವನ್ನು ವೇಗವಾಗಿ ಕಲುಷಿತಗೊಳಿಸುತ್ತವೆ. ಅಂತ್ರದ ಮಲವನ್ನು ತೆರವು ಮಾಡುವುದರಿಂದ ದುರ್ವಾಸನೆ ಕಡಿಮೆಯಾಗುವುದಲ್ಲದೆ, ದೇಹದ ಕಲುಷಿತ ವಿಕರಣೆ ನಿಧಾನಗೊಳ್ಳುತ್ತದೆ. ಇಂದಿನ Embalming ವಿಧಾನದಲ್ಲೂ ಇದೇ ತತ್ವವನ್ನು ಬಳಸಲಾಗುತ್ತದೆ ಎನ್ನುವುದು ಗಮನಾರ್ಹ.

- **ನೈಸರ್ಗಿಕ ವಸ್ತುಗಳಿಂದ ಶವ ಸಂರಕ್ಷಣೆ**

ಮುಂಜೆ ಹುಲ್ಲು, ಕುಶ ಹುಲ್ಲು, ಶಣ ಮತ್ತು ಮರದ ತೊಗಟೆಗಳಿಂದ ಶವವನ್ನು ಸುತ್ತುವಂತೆ ಸುಶ್ರುತರು ವಿವರಿಸಿದ್ದಾರೆ. ಈ ನೈಸರ್ಗಿಕ ವಸ್ತುಗಳು ಹೆಚ್ಚುವರಿ ತೇವಾಂಶವನ್ನು ಹೀರಿಕೊಳ್ಳುವುದರೊಂದಿಗೆ ದೇಹವನ್ನು ಕೀಟಗಳಿಂದ ರಕ್ಷಿಸುತ್ತವೆ. ನಂತರ ಶವವನ್ನು ಪಂಜರದಲ್ಲಿ ಇಟ್ಟು ಜನರ ಗಮನಕ್ಕೆ ಬಾರದ ಪ್ರದೇಶದಲ್ಲಿರುವ ನಿಧಾನವಾಗಿ ಹರಿಯುವ ನೀರಿನಲ್ಲಿ ಸುಮಾರು ಏಳು ದಿನಗಳವರೆಗೆ ಮುಳುಗಿಸಲಾಗುತ್ತಿತ್ತು.

ವೈಜ್ಞಾನಿಕ ದೃಷ್ಟಿಯಿಂದ, ನೀರಿನಲ್ಲಿ ಇರಿಸುವುದರಿಂದ ಚರ್ಮ ಮತ್ತು ಮೇಲ್ಮೈ ಪದರಗಳು ಮೃದುವಾಗುತ್ತವೆ. ಇದರ ಪರಿಣಾಮವಾಗಿ ಸ್ನಾಯುಗಳು, ನರಗಳು ಮತ್ತು ರಕ್ತನಾಳಗಳನ್ನು ಸುಲಭವಾಗಿ ಅಧ್ಯಯನ ಮಾಡಬಹುದು. ನಿಧಾನವಾಗಿ ಹರಿಯುವ ನೀರು ಬ್ಯಾಕ್ಟೀರಿಯಾ ಸೋಂಕಿನ


Scanned with OKEN Scanner

ಪ್ರಮಾಣವನ್ನು ಕಡಿಮೆ ಮಾಡುವುದರಿಂದ decomposition ತಪ್ಪುತ್ತದೆ ಎಂದು ತಜ್ಞರು ವಿವರಿಸುತ್ತಾರೆ.

- **ಶವಚ್ಛೇದನ ವಿಧಾನ**

ಶವವನ್ನು ಹೊರತೆಗೆದ ನಂತರ ಉಶೀರ ಹುಲ್ಲು ಅಥವಾ ಬಿದಿರಿನ ಮೃದುವಾದ ನಾರುಗಳಿಂದ ನಿಧಾನವಾಗಿ ಒರೆಸುವಂತೆ ಸೂಚಿಸಲಾಗಿದೆ. ತೀಕ್ಷ್ಣ ಶಸ್ತ್ರೋಪಕರಣಗಳ ಬಳಕೆಯನ್ನು ತಪ್ಪಿಸುವ ಮೂಲಕ ಸೂಕ್ಷ್ಮ ರಚನೆಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಈ ವಿಧಾನವು ಇಂದಿನ modern blunt dissection ತಂತ್ರಕ್ಕೆ ಹೋಲುತ್ತದೆ. ಚರ್ಮದಿಂದ ಆರಂಭಿಸಿ ಸ್ನಾಯು, ನರ, ರಕ್ತನಾಳ ಹಾಗೂ ಅಂತರಾಂಗಗಳವರೆಗೆ ಪದರಪದರವಾಗಿ ಅಧ್ಯಯನ ನಡೆಸಲಾಗುತ್ತಿತ್ತು.

- **ಶವಚ್ಛೇದನದ ಮಹತ್ವ**

ಪುಸ್ತಕಗಳಲ್ಲಿ ಕಾಣುವ ಚಿತ್ರಗಳು ಎರಡು ಆಯಾಮಗಳಲ್ಲಿರುತ್ತವೆ. ಆದರೆ ನೈಜ ಮಾನವ ದೇಹವು ಎರಡು ಆಯಾಮಗಳಲ್ಲಿರುವ (3D) ರಚನೆಯಾಗಿದೆ. ಶವ ವಿಚ್ಛೇದನದಿಂದ ವಿದ್ಯಾರ್ಥಿಗಳು ಅಂಗಾಂಗಗಳ ಗಾತ್ರ, ಆಳ, ದಿಕ್ಕು ಮತ್ತು ಪರಸ್ಪರ ಸಂಬಂಧಗಳನ್ನು ನೇರವಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದು ವೈದ್ಯಕೀಯ ಶಿಕ್ಷಣದಲ್ಲಿ ಅತ್ಯಂತ ಮೂಲಭೂತ ಮತ್ತು ಅವಿಭಾಜ್ಯ ಹಂತವಾಗಿದೆ.

- **Cadaveric dissection ಮೂಲಕ ವಿದ್ಯಾರ್ಥಿಗಳು:**

ಹೀಗೆ ಹಲವು ಶಸ್ತ್ರಚಿಕಿತ್ಸಾ ಕೌಶಲ್ಯಗಳನ್ನು ಸುರಕ್ಷಿತ ಪರಿಸರದಲ್ಲಿ ಅಭ್ಯಾಸ ಮಾಡಬಹುದು. ಜೀವಂತ ರೋಗಿಗಳ ಮೇಲೆ ಚಿಕಿತ್ಸೆ ನೀಡುವ ಮೊದಲು ಈ ತರಬೇತಿ ಅತ್ಯಂತ ಅಗತ್ಯವೆಂದು ಪರಿಗಣಿಸಲಾಗುತ್ತದೆ. ಮಾನವ ದೇಹದಲ್ಲಿ ಸ್ನಾಯುಗಳು, ನರಗಳು ಮತ್ತು ರಕ್ತನಾಳಗಳು ನಿರ್ದಿಷ್ಟ ಪದರಗಳಲ್ಲಿ ವ್ಯವಸ್ಥಿತವಾಗಿರುತ್ತವೆ. ವಿಚ್ಛೇದನದ ಮೂಲಕ ಈ natural anatomical planes ಸ್ಪಷ್ಟವಾಗಿ ತಿಳಿಯುತ್ತವೆ.

ಇದು ಶಸ್ತ್ರಚಿಕಿತ್ಸೆಯಲ್ಲಿ, ಕಡಿಮೆ, ರಕ್ತಸ್ರಾವ, ಕಡಿಮೆ ಹಾನಿ, ವೇಗವಾದ ಶಸ್ತ್ರಚಿಕಿತ್ಸೆ, ಸುರಕ್ಷಿತ ಶಸ್ತ್ರಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ. ಸರಿಯಾದ Anatomy ಜ್ಞಾನವಿಲ್ಲದೆ ಶಸ್ತ್ರಚಿಕಿತ್ಸೆಯಲ್ಲಿ ನರ ಹಾನಿ, ರಕ್ತನಾಳ ಗಾಯ ಅಥವಾ ಅಂಗಾಂಗ ಹಾನಿಯ ಸಾಧ್ಯತೆ ಹೆಚ್ಚುತ್ತದೆ. Cadaveric training ವೈದ್ಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಹಾನಿ ಕಡಿಮೆ ಮಾಡಲು ಸಹಕಾರಿಯಾಗುತ್ತದೆ.

ಪ್ರತಿ ಮಾನವ ದೇಹವೂ ಒಂದೇ ರೀತಿಯಾಗಿರುವುದಿಲ್ಲ. ಕೆಲವರಲ್ಲಿ ನರಗಳ ದಾರಿ, ರಕ್ತನಾಳಗಳ ಶಾಖೆಗಳು ಅಥವಾ ಅಂಗಾಂಗಗಳ ಸ್ಥಾನ ಭಿನ್ನವಾಗಿರಬಹುದು. ಈ anatomical variations ಗಳನ್ನು ನೈಜ ಶವ ಅಧ್ಯಯನದಿಂದ ಮಾತ್ರ ಗುರುತಿಸಲು ಸಾಧ್ಯ. ಇದು ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಅನಿರೀಕ್ಷಿತ ಸಮಸ್ಯೆಗಳನ್ನು ತಪ್ಪಿಸಲು ನೆರವಾಗುತ್ತದೆ.

ಹೀಗೆ ಅನೇಕ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಶವ ಅಧ್ಯಯನ ಪ್ರಮುಖ ಪಾತ್ರ ವಹಿಸಿದೆ. ವೈದ್ಯಕೀಯ ಕಾಲೇಜುಗಳಲ್ಲಿ ಶವವನ್ನು "ಮೊದಲ ಗುರು" ಎಂದು ಪರಿಗಣಿಸಲಾಗುತ್ತದೆ. ಇದು ವಿದ್ಯಾರ್ಥಿಗಳಲ್ಲಿ: ಮಾನವ ದೇಹದ ಗೌರವ ಸಹಾನುಭೂತಿ ಸೇವಾ ಮನೋಭಾವ ವೃತ್ತಿಪರ ನೈತಿಕತೆ ಬೆಳೆಸಲು ಸಹಕಾರಿಯಾಗುತ್ತದೆ.

- **ದೇಹದಾನದ ಮಹತ್ವ**

ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ದೇಹದಾನ ಇಂದು ಮಹತ್ವದ ಸಾಮಾಜಿಕ ಸೇವೆಯಾಗಿ ಪರಿಗಣಿಸಲಾಗಿದೆ. Neurosurgery, Orthopedic Surgery, Plastic Surgery ಹಾಗೂ Laparoscopic Surgery ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೊಸ ತಂತ್ರಗಳನ್ನು ಅಭ್ಯಾಸ ಮಾಡಲು ದೇಹದಾನ ನೆರವಾಗುತ್ತದೆ. ಅದರ ಜೊತೆಗೆ Anatomical Research, Implant Testing ಮತ್ತು Forensic Studies ಗಳಿಗೂ ದೇಹದಾನ ಅಮೂಲ್ಯ ಕೊಡುಗೆಯಾಗಿದೆ.

ಸಾವಿರಾರು ವರ್ಷಗಳ ಹಿಂದೆ ಆಚಾರ್ಯ ಸುಶ್ರುತರು ವಿವರಿಸಿದ ಶವ ಸಂರಕ್ಷಣೆ ಮತ್ತು ವಿಚ್ಛೇದನ ವಿಧಾನವು ಅತ್ಯಂತ ವೈಜ್ಞಾನಿಕ ಮತ್ತು ಪ್ರಾಯೋಗಿಕವಾಗಿತ್ತು. ನೇರ ಶವ ಅಧ್ಯಯನವಿಲ್ಲದೆ ವೈದ್ಯಕೀಯ ಶಿಕ್ಷಣ ಸಂಪೂರ್ಣವಾಗುವುದಿಲ್ಲ ಎಂಬ ಅವರ ದೃಷ್ಟಿಕೋನ ಇಂದು ಕೂಡ ಸಮಾನವಾಗಿ ಪ್ರಸ್ತುತವಾಗಿದೆ. ಆಧುನಿಕ Cadaveric Dissection, Surgical Anatomy ಮತ್ತು Body Donation ಪರಿಕಲ್ಪನೆಗಳಿಗೆ ಸುಶ್ರುತರ ಚಿಂತನೆಗಳು ಮೂಲಪ್ರೇರಣೆಯಾಗಿವೆ ಎಂಬುದು ಭಾರತೀಯ ವೈದ್ಯಶಾಸ್ತ್ರದ ವೈಭವವನ್ನು ಮತ್ತೊಮ್ಮೆ ಸಾಬೀತುಪಡಿಸುತ್ತದೆ.

- **ಮೃತದೇಹ ದಾನದ ಕಾನೂನು ನಿಯಮಗಳು**

ಭಾರತದ ವಿವಿಧ ರಾಜ್ಯಗಳಲ್ಲಿ "Anatomy Act" ಅಡಿಯಲ್ಲಿ ಮೃತದೇಹ ದಾನದ ಪ್ರಕ್ರಿಯೆಯನ್ನು ನಿಯಂತ್ರಿಸಲಾಗುತ್ತದೆ. ಕರ್ನಾಟಕದಲ್ಲಿಯೂ ವೈದ್ಯಕೀಯ ಕಾಲೇಜುಗಳು ಮತ್ತು ಶರೀರರಚನಾ ವಿಭಾಗಗಳು ಸರ್ಕಾರದ ನಿಯಮಾವಳಿಗಳ Karnataka state anatomy act 1957 ಅನುಸಾರ ದಾನ ಸ್ವೀಕರಿಸುತ್ತವೆ.

- **ಪ್ರಮುಖ ನಿಯಮಗಳು**

- ದಾನಿಯು ಸ್ವಯಂಪ್ರೇರಿತವಾಗಿ ಮೃತದೇಹ ದಾನಕ್ಕೆ ಲಿಖಿತ ಒಪ್ಪಿಗೆ ನೀಡಿರಬೇಕು.
- ಕುಟುಂಬ ಸದಸ್ಯರಿಗೆ ದಾನದ ಬಗ್ಗೆ ಪೂರ್ವ ಮಾಹಿತಿ ಇರಬೇಕು.
- ಮರಣ ಪ್ರಮಾಣಪತ್ರ (Death Certificate) ಕಡ್ಡಾಯವಾಗಿರುತ್ತದೆ.
- ಶವವನ್ನು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗಾಗಿ ಮಾತ್ರ ಬಳಸಲಾಗುತ್ತದೆ.
- ಮಾನವ ದೇಹದ ಖರೀದಿ ಅಥವಾ ಮಾರಾಟ ಕಾನೂನುಬಾಹಿರವಾಗಿದೆ.
- ಅಧ್ಯಯನ ಪೂರ್ಣಗೊಂಡ ನಂತರ ಮೃತದೇಹದ ಅವಶೇಷಗಳನ್ನು ಗೌರವಯುತವಾಗಿ ವಿಲೇವಾರಿ ಮಾಡಲಾಗುತ್ತದೆ.

- **ಮೃತದೇಹ ದಾನದ ನೈತಿಕ ಅಂಶಗಳು**

ಮೃತದೇಹವನ್ನು ವೈದ್ಯಕೀಯ ಶಿಕ್ಷಣಕ್ಕಾಗಿ ಬಳಸುವಾಗ ಅತ್ಯುನ್ನತ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಕಾಪಾಡಬೇಕು. ವಿದ್ಯಾರ್ಥಿಗಳು ಮೃತದೇಹವನ್ನು "ಮೊದಲ ಗುರು" ಎಂದು ಪರಿಗಣಿಸುವ ಪರಂಪರೆ ಅನೇಕ ವೈದ್ಯಕೀಯ ಸಂಸ್ಥೆಗಳಲ್ಲಿ ಕಂಡ[illegible]ವಾಗಿ ಕೆಳಗಿನ ಅಂಶಗ[illegible]

- ಮೃತದೇಹದ [illegible]
- ದಾನಿಯ ವ್ಯ[illegible]ತಿಯ ಗೌಪ್ಯತೆ.
- ಶಿಕ್ಷಣ ಮತ್ತು ಸಂಶೋಧನೆಗೆ ಮಾತ್ರ ಬಳಕೆ.
- ಧಾರ್ಮಿಕ ಹಾಗೂ ಸಾಂಸ್ಕೃತಿಕ ಭಾವನೆಗಳಿಗೆ ಗೌರವ.

- **ಸಮಾಜದಲ್ಲಿರುವ ತಪ್ಪು ಕಲ್ಪನೆಗಳು**

ಮೃತದೇಹ ದಾನದ ಬಗ್ಗೆ ಅನೇಕ ತಪ್ಪು ಕಲ್ಪನೆಗಳು ಸಮಾಜದಲ್ಲಿ ಇನ್ನೂ ಅಸ್ತಿತ್ವದಲ್ಲಿವೆ.

- ದಾನ ಮಾಡಿದರೆ ಅಂತ್ಯಕ್ರಿಯೆ ನಡೆಯುವುದಿಲ್ಲ ಎಂಬ ತಪ್ಪು ನಂಬಿಕೆ.
- ಧಾರ್ಮಿಕವಾಗಿ ದಾನ ನಿಷಿದ್ಧ ಎಂಬ ಭಾವನೆ.
- ದೇಹವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ ಎಂಬ ಆತಂಕ.
- ಕುಟುಂಬ ಸದಸ್ಯರ ಭಾವನಾತ್ಮಕ ಹಿಂಜರಿಕೆ.

ಆದರೆ ವೈದ್ಯಕೀಯ ಸಂಸ್ಥೆಗಳು ಕಟ್ಟುನಿಟ್ಟಿನ ನಿಯಮಗಳನ್ನು ಅನುಸರಿಸುವುದರಿಂದ ಈ ಆತಂಕಗಳಿಗೆ ಯಾವುದೇ ಆಧಾರವಿಲ್ಲ.

- **ಮೃತದೇಹ ದಾನವನ್ನು ಉತ್ತೇಜಿಸುವ ಕ್ರಮಗಳು**

- ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳ ಆಯೋಜನೆ.
- ಶಾಲಾ-ಕಾಲೇಜುಗಳಲ್ಲಿ ಅರಿವು ಮೂಡಿಸುವುದು.
- ವೈದ್ಯಕೀಯ ಸಂಸ್ಥೆಗಳ ಮೂಲಕ ಮಾಹಿತಿ ಹಂಚಿಕೆ.
- ದಾನಿಗಳ ಕುಟುಂಬಗಳನ್ನು ಗೌರವಿಸುವ ಕಾರ್ಯಕ್ರಮಗಳು.
- ಸರಳ ನೋಂದಣಿ ವ್ಯವಸ್ಥೆಯ ಅನುಷ್ಠಾನ.

- **ಜೀವಸಾರ್ಥಕತೆ: ಮರಣಾನಂತರವೂ ಜೀವದಾನ, ಜ್ಞಾನದಾನ**

ಬೆಂಗಳೂರು: ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಜೀವಸಾರ್ಥಕತೆ (Jeevasarthakathe) ಸಂಸ್ಥೆಯು ರಾಜ್ಯದಲ್ಲಿ ಅಂಗಾಂಗ, ಹಾಗೂ ದೇಹದಾನ ಚಟುವಟಿಕೆಗಳನ್ನು ಸಮನ್ವಯಗೊಳಿಸುತ್ತಿದೆ. ಮರಣಾನಂತರವೂ ಸಮಾಜಕ್ಕೆ ಸೇವೆ ಸಲ್ಲಿಸುವ ಅವಕಾಶವನ್ನು ಒದಗಿಸುವ ಈ ಯೋಜನೆ, ಅನೇಕ ಜೀವಗಳನ್ನು ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ಮರಣಾನಂತರ ಹೃದಯ, ಯಕೃತ್ತು, ಮೂತ್ರಪಿಂಡ, ಶ್ವಾಸಕೋಶ, ಅಗ್ನ್ಯಾಶಯ, ಕಣ್ಣು, ಚರ್ಮ, ಮೂಳೆ ಸೇರಿದಂತೆ ವಿವಿಧ ಅಂಗಾಂಗಗಳು ದಾನ ಮಾಡಬಹುದಾಗಿದೆ. ಒಬ್ಬ ದಾನಿಯು ಹಲವು ರೋಗಿಗಳಿಗೆ ಹೊಸ ಬದುಕನ್ನು ನೀಡಬಲ್ಲನು. ವಿಶೇಷವಾಗಿ ನೇತ್ರದಾನದಿಂದ ಅಂಧರಿಗೆ ದೃಷ್ಟಿಯನ್ನು ಮರಳಿ ನೀಡಲು ಸಾಧ್ಯವಾಗುತ್ತದೆ. ಇದರ ಜೊತೆಗೆ ದೇಹದಾನವು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗೆ ಅಮೂಲ್ಯ ಕೊಡುಗೆಯಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ದಾನವಾದ ದೇಹಗಳ ಮೂಲಕ ಮಾನವ ದೇಹರಚನೆಯ ಅಧ್ಯಯನ ನಡೆಸಿ ವೈದ್ಯಕೀಯ ಜ್ಞಾನವನ್ನು ವೃದ್ಧಿಪಡಿಸುತ್ತಾರೆ.

ಜೀವಸಾರ್ಥಕತೆ ಪೋರ್ಟಲ್‌ನಲ್ಲಿ ನಾಗರಿಕರು ಆನ್‌ಲೈನ್ ಮೂಲಕ ದಾನ ಪ್ರತಿಜ್ಞೆ ಮಾಡಬಹುದಾಗಿದೆ. ಆದರೆ ದಾನಿಯ ಇಚ್ಛೆಯೊಂದಿಗೆ ಕುಟುಂಬದವರ ಸಹಕಾರ ಮತ್ತು ಒಪ್ಪಿಗೆಯೂ ಅತ್ಯಂತ ಮುಖ್ಯವಾಗಿದೆ.

"ಅಂಗಾಂಗ ದಾನ ಜೀವದಾನ, ದೇಹದಾನ ಜ್ಞಾನದಾನ" ಎಂಬ ಸಂದೇಶದೊಂದಿಗೆ ಜೀವಸಾರ್ಥಕತೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದು, ಮರಣಾನಂತರವೂ ಮಾನವೀಯ ಮೌಲ್ಯಗಳನ್ನು ಉಳಿಸುವ ಮಹತ್ತರ ಕಾರ್ಯವನ್ನು ನಿರ್ವಹಿಸುತ್ತಿದೆ.


BENGALURU
HEALTH FOUNDATION

BENGALURU HEALTH FOUNDATION
*Building a Healthier Society, Together*

**Health is not just the absence of disease - it is the foundation of a strong and vibrant community.**

**Bengaluru Health Foundation (BHF)** is a dedicated non-profit organization committed to promoting public health, preventive healthcare, health education, and community wellness initiatives across Karnataka.

**Our Key Activities**

✓ Health Awareness Campaigns
✓ Health Screening & Medical Camps
✓ Public Health Education Programs
✓ Support for Underprivileged Patients
✓ School & Community Health Initiatives
✓ Women's, Children's & Senior Citizens' Health Programs
✓ Healthcare Research & Knowledge Dissemination
✓ Books, Magazines, and Journal publication
✓ Awards for Health Professionals



**Join the Movement**

Whether you are a healthcare professional, corporate organizatior institution, philanthropist, or concerned citizen, your support car healthier future for our communities.

Together, we can make quality healthcare awareness and services accessible to

Be a Volunteer | Be a Donor | Be a Health Ambassador

**Bengaluru Health Foundation**
*Promoting Health • Inspiring Wellness • Serving Society*

Contact: 81975 54373 Email: mediaicon@ymail.com

Address - #18, Samruddhi, Patrakartara Badavane, Kakolu Road, Rajanukunte, Bengaluru 560119

"Healthy Citizens, Healthy Society, Healthy Nation."

ವೈದ್ಯಲೋಕ www.vydyaloka.in ww.healthvision.in Health Vision





Scanned with OKEN Scanner